ಸಿಂಧನೂರು ತಾಲ್ಲೂಕಿನ ಆಯನೂರಿನಿಂದ ಒಳ ಬಳ್ಳಾರಿ ಮತ್ತು ಹೆಡಗಿನ ಹಾಳದಿಂದ ಜವಳಗೆರೆ ರಸ್ತೆಗಳ ಬಗ್ಗೆ.

ಶ್ರೀ ಆರ್. ನಾರಾಯಣಪ್ಪ (ಸಿಂಧನೂರು). —ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿಂಧನೂರು ತಾಲ್ಲೂಕಿನ ಆಯನೂರಿನಿಂದ ಒಳ ಬಳ್ಳಾರಿ ಮತ್ತು ಹೆಡಗಿನಹಾಳದಿಂದ ತಿಮ್ಮಾಪುರ ಯುದ್ದಲದೊಡ್ಡಿ, ಮಾರ್ಗವಾಗಿ ಜವಳಗೇರಾಗೆ ರಸ್ತೆಗಳನ್ನು ರಚಿಸಲು ಇದುವರೆವಿಗೂ ಖರ್ಚಾದ ಹಣ ಎಷ್ಟು ಮತ್ತು ಅವು ಈಗ ಯಾವ ಹಂತದಲ್ಲಿದೆ,

ಆ) ಈ ರಸ್ತೆಗಳ ಕೆಲಸವನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಆಯನೂರು ಒಳ ಬಳ್ಳಾರಿ ರಸ್ತೆಗೆ ಈವರೆಗೆ ೭.೧೬ ಲಕ್ಷ ರೂಪಾಯಿಗಳು ವೆಚ್ಚವಾಗಿದ್ದು ೧೪.೪೦ ಕಿ. ಮೀ. ಉದ್ದವಿರುವ ಈ ರಸ್ತೆಯಲ್ಲಿ ರಸ್ತೆ ನಿರ್ಮಾಣದ ಮಣ್ಣಿನ ಏರಿ ಕೆಲಸ ಸೋಲಿಂಗ್ ಹಾಗೂ ಸಣ್ಣ ಜಲ್ಲಿ ಹಾಕುವ ಕೆಲಸಗಳು ಭಾಗಶ: ಪೂರ್ಣಗೊಂಡಿರುತ್ತದೆ. ಆರು ಸಣ್ಣ ಸೇತುವೆಗಳ ಹಾಗೂ ೪ ಹಾರ್ಡ್ ಪ್ಯಾಸೇಜ್‌ಗಳ ಕೆಲಸ ಉಳಿದಿರುತ್ತದೆ. ಹೆಡಗಿನಹಾಳ ಜವಳಗೇರ ರಸ್ತೆಯು ೧೪.೮ ಕಿ. ಮೀ. ಉದ್ದವಿರುತ್ತದೆ. ಒಟ್ಟು ೧೩ ಕಿ. ಮೀ. ಉದ್ದದಷ್ಟು ರಸ್ತೆ ಕೆಲಸಗಳು ಪೂರ್ಣಗೊಂಡಿರುತ್ತವೆ. ಈವರೆಗೆ ೧೦.೯೫ ಲಕ್ಷ ರೂ ಗಳು ವ್ಯಯವಾಗಿರುತ್ತದೆ. ಎರಡು ಸೇತುವೆಗಳ ಕೆಲಸಗಳು ಹಾಗೂ ಉಳಿದ ೫.೮ ಕಿ. ಮೀ. ಉದ್ದದಷ್ಟು ರಸ್ತೆಯಲ್ಲಿ ಮೆಟಲಿಂಗ್, ಸೋಲಿಂಗ್ ಕೆಲಸವಾಗಬೇಕಾಗಿದೆ.

ಆ) ಹಣದ ಲಭ್ಯತೆಯನ್ನು ಅನುಸರಿಸಿ ಎರಡು ಮೂರು ವರ್ಷಗಳಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ಸಭೆಯಲ್ಲಿ ಮಂಡಿಸಲಾಗುವ ಕಾಗದ ಪತ್ರಗಳು

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುಚ್ಛಕ್ತಿ, ಗಣಿ ಮತ್ತು ಭೂವಿಜ್ಞಾನ ಮಂತ್ರಿಯವರು).—ಮಾನ್ಯ ಅಧ್ಯಕ್ಷರೆ, ೧೯೪೯ನೇ ಇಸವಿಯ ವಿದ್ಯುಚ್ಛಕ್ತಿ (ಸರಬರಾಜು) ಶಾಸನದ ೭೫ನೇ ಕಲುಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ೧೯೮೧-೮೨, ೧೯೮೨-೮೩ ಮತ್ತು ೧೯೮೩-೮೪ನೇ ಸಾಲಿನ ವಾರ್ಷಿಕ ಆಡಳಿತ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ANNOUNCEMENT

Mr. Speaker.—I have recieved a Communication from the Asst Commissioner of police, ulsoor Gata Police station about the release of Sriyuths K. B. Shanappa and U. Bhupathi at 5.45 P. M. on 29-7-85.

ಗಮನ ಸೆಳೆಯುವ ಸೂಚನೆ

ವಿಷಯ ಅರಸೀಕರೆ ತಾಲ್ಲೂಕಿನ ದಾಸಿಹಳ್ಳಿಯಲ್ಲಿ ಮಹಿಳೆಯಂನ್ನು ಕಾಡಿಸಿದ ದೂರಿನ ಬಗ್ಗೆ.

ಶ್ರೀ ಕೆ. ಎಚ್ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಅರಸೀಕರೆ ತಾಲ್ಲೂಕಿನ ದಾಸಿಹಳ್ಳಿಯಲ್ಲಿ ಮಹಿಳೆಯರನ್ನು ಪುಂಡರು ಕಾಡಿಸಿದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ ಆದೇರೀತಿ ದಿನಾಂಕ ೨೩-೭-೮೫ನೇ 'ಜನವಾಣಿ' ಪತ್ರಿಕೆಯಲ್ಲಿ ಬಂದಿರುವ ವಿಚಾರದ ಬಗ್ಗೆಯೂ ಗಮನ ಸೆಳೆಯುತ್ತೇನೆ.